# ನಗರಸಭಾ ಕಾರ್ಯಾಲಯ, ಹರಿಹರ.

ನಂ:ನಸಹ:ಮಿಸ್ೇ:ಸಿ.ಆರ್:120:2006-07 ದಿನಾಂಕ:16/03/2007

# ಹರಾಜ್ ಪ್ರಕಟಣೆ

ಈ ಮೂಲಕ ಸಮಸ್ತ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ಹರಿಹರ ನಗರಸಭೆಗೆ ಸೇರಿದ ಪಿ.ಬಿ. ರಸ್ತೆಗೆ ಅಭಿಮುಖವಾಗಿರುವ ನಗರಸಭೆ ಕಛೇರಿ ಮುಂಭಾಗದಲ್ಲಿರುವ ಮಳಿಗೆ ಸಂಖ್ಯೆ:1,3 ಹಾಗೂ ಬಸ್ ಸ್ಟಾಂಡ್ ರಸ್ತೆಯ ಗರಿಷ್ಟ 4 ವರ್ಷ 11 ತಿಂಗಳ ಅವಧಿಗೆ ಮಾಹೆಯಾನ ಲೀವ್ ಅಂಡ್ ಲೈಸನ್ಸ್ ಫೀ ಆಧಾರದ ಮೇಲೆ ಗುತ್ತಿಗೆಗೆ ನೀಡಲು ದಿನಾಂಕ:16/04/2007ರ ಸೋಮವಾರ ಬೆಳಗ್ಗೆ 11-00ಗಂಟೆಗೆ ನಗರಸಭೆ ಕಛೇರಿ ಆವರಣದಲ್ಲಿ ಬಹಿರಂಗವಾಗಿ ಹರಾಜ್ ಮಾಡಲಾಗುವುದು. ಈ ಕೆಳಗೆ ಮಳಿಗೆಗಳ ಸಂಖ್ಯೆಯ ಮುಂದೆ ನಮೂದಿಸಿರುವ ಠೇವಣಿಯೊಂದಿಗೆ ಇಷ್ಟವುಳ್ಳವರು ಹರಾಜಿನಲ್ಲಿ ಭಾಗವಹಿಸಿ ಛಡ ಸವಾಲು ಮೂಲಕ ಪಡೆದುಕೊಳ್ಳಬಹುದಾಗಿದೆ. ಹಾಗೂ ಕೆಳಕಂಡ ಷರತ್ತುಗಳಿಗೆ ಬದ್ದರಾಗಿರತಕ್ಕದಾಗಿದೆ. ಹೆಚ್ಚಿನ ವಿವರ ಹಾಗು ಮಾಹಿತಿಗಳನ್ನು ಕಛೇರಿ ವೇಳೆಯಲ್ಲಿ ಕಂದಾಯಾಧಿಕಾರಿ ಇವರಲ್ಲಿ ಪಡೆದುಕೊಳ್ಳಬಹುದಾಗಿದೆ.

**ನಗರಸಭಾ ಕಛೇರಿ ಮುಂಭಾಗದ ಮಳಿಗೆಗಳು**

| ಕ್ರ. ಸಂ. | ಹರಾಜಿಗೆ ಒಳಪಟ್ಟ ಮಳಿಗೆಗಳ ವಿವರಗಳು | ಹರಾಜಿಗೆ ಮುನ್ನ ಪಾವತಿಸಬೇಕಾಗಿದ್ದ ಠೇವಣಿ ಮೊತ್ತ | ಹರಾಜು ನಡೆಯುವ ಸ್ಥಳ |
|---|---|---|---|
| 1 | 01 | ರೂ.1,00,000-00 | ನಗರಸಭಾ ಕಾರ್ಯಾಲಯ |
| 2 | 03 | ರೂ.1,00,000-00 | ನಗರಸಭಾ ಕಾರ್ಯಾಲಯ |
| **ಬಸ್ ಸ್ಟ್ಯಾಂಡ್ ರಸ್ತೆಯಲ್ಲಿರುವ ಮಳಿಗೆಗಳು** | | | |
| 3 | 01 | ರೂ.50,000-00 | ನಗರಸಭಾ ಕಾರ್ಯಾಲಯ |

## -:ಷರತ್ತುಗಳು:-

1. ಹರಾಜಿನಲ್ಲಿ ಭಾಗವಹಿಸುವವರು ಠೇವಣಿಗಾಗಿ ರೂ.1,00,000-00ಗಳನ್ನು ಸ್ಥಳದಲ್ಲಿಯೇ ಪಾವತಿಸಿ ನಂತರ ಹರಾಜಿನಲ್ಲಿ ಭಾಗವಹಿಸತಕ್ಕದ್ದು.
2. ಯಶಸ್ವಿ ಬಿಡ್‌ದಾರರು ಮಳಿಗೆಯನ್ನು ಸ್ವಾಧೀನಕ್ಕೆ ಪಡೆದ ದಿನದಿಂದ 4 ವರ್ಷ 11 ತಿಂಗಳುಗಳ ಗುತ್ತಿಗೆ ಅವಧಿ ಆರಂಭಗೊಳ್ಳುತ್ತದೆ. ಅವಧಿ ಮುಗಿದ ಕೂಡಲೇ ಸದರಿ ಮಳಿಗೆಗಳನ್ನು ಖುಲ್ಲಾ ಪಡಿಸಿ, ನಗರಸಭೆಯ ವಶಕ್ಕೆ ಒಪ್ಪಿಸತಕ್ಕದ್ದು.
3. ಹರಾಜಿನಲ್ಲಿ ಯಶಸ್ವಿ ಯಾಗದವರ ಠೇವಣಿಯನ್ನು ಕೂಡಲೇ ಹಿಂದಕ್ಕೆ ಕೊಡಲಾಗುವುದು.
4. ನಗರಸಭೆಯ ಅಧಿಕೃತ ಅನುಮತಿ ಇಲ್ಲದೇ ಮಳಿಗೆಯಲ್ಲಿ ಯಾವುದೇ ರೀತಿಯ ಬದಲಾವಣೆ ಮಾಡಲು ಅವಕಾಶವಿಲ್ಲ ಹಾಗೂ ಕಟ್ಟಡದಲ್ಲಿ ಸ್ಫೋಟಕ, ಮದ್ದು, ಗುಂಡು,

ರಾಸಾಯನಿಕ, ಅನಿಲ ಇತ್ಯಾದಿ ಅಪಾಯಕಾರಿ ವಸ್ತುಗಳ ಶೇಖರಣೆ ಅಥವಾ ಮಾರಾಟ ಮಾಡತಕ್ಕದ್ದಲ್ಲ.

5. ಪ್ರತಿ ತಿಂಗಳು ಮಾಹೆಯಾನ ಲೀವ್ ಅಂಡ್ ಲೈಸನ್ಸ್ ಫೀಯನ್ನು 5ನೇ ತಾರೀಖಿನೊಳಗಾಗಿ ಪಾವತಿಸಬೇಕು. ತಪ್ಪಿದಲ್ಲಿ ಶೇ.6ರಂತೆ ಬಡ್ಡಿಯನ್ನು ವಿಧಿಸಲಾಗುವುದು. ಸತತ 3 ತಿಂಗಳ ಬಾಡಿಗೆ ಬಾಕಿ ಉಳಿದಲ್ಲಿ ಅಂತಹ ಮಳಿಗೆಯ ಉಳಿದ ಗುತ್ತಿಗೆ ಅವಧಿರದ್ದುಗೊಳಿಸಿ ಬಆಕಿ ಹಣವನ್ನು ಭದ್ರತಾ ಠೇವಣಿ ಹಣದಲ್ಲಿ ಸರಿಹೊಂದಿಸಿಕೊಂಡು ಮಳಿಗೆಯನ್ನು ನಗರಸಭೆಯ ವಶಕ್ಕೆ ತೆಗೆದುಕೊಂಡು ಮರು ಹರಾಜು ಮಾಡಲಾಗುವುದು. ಮರುಹರಾಜಿನಲ್ಲಿ ನಷ್ಟ ಉಂಟಾದಲ್ಲಿ ಸದರಿ ನಷ್ಟಕ್ಕೆ ಈ ಗುತ್ತಿಗೆದಾರರನ್ನು ಹೊಣೆಗಾರರನ್ನಾಗಿಸಿ ಅವರ ಠೇವಣಿ ಹಣದಲ್ಲಿ ಮುರಿದುಕೊಳ್ಳಲಾಗುವುದು ಲಾಭ ಬಂದಲ್ಲಿ ಇವರಿಗೆ ಸಂಭಂದಿಸಿರುವುದಿಲ್ಲ.
6. ಹರಾಜಿನಲ್ಲಿ ಮಳಿಗೆಯನ್ನು ಪಡೆದವರೇ ಅದನ್ನು ಉಪಯೋಗಿಸಬೇಕು. ಬೇರೆಯವರಿಗೆ ಒಳ ಬಾಡಿಗೆಗೆ ಆಗಲಿ ಅಥವಾ ಬೇರೆ ರೂಪದಲ್ಲಿ ಆಗಲಿ ಪರಭಾರೆ ಮಾಡತಕ್ಕದ್ದಲ್ಲ.
7. ಮಳಿಗೆಯ ಸುಣ್ಣ ಬಣ್ಣ ಹಾಗೂ ಸಣ್ಣಪುಟ್ಟ ರಿಪೇರಿಯನ್ನು ಲೀಜ್‌ದಾರರೇ ತಮ್ಮ ಸ್ವಂತ ಖರ್ಚಿನಲ್ಲಿ ಮಾಡಿಸಬೇಕು. ಹಾಗೂ ಇದರಲ್ಲಿ ಉಪಯೋಗಿಸಿದ ವಿದ್ಯುತ್ ಬಿಲ್ಲಿನ ಹಣವನ್ನು ಬಾಡಿಗೆದಾರರೇ ಪಾವತಿಸಬೇಕು.
8. ಹರಾಜು ಸಮಕ್ಷಮ ಪ್ರಾಧಿಕಾರರಿಂದ ಮಂಜೂರಾತಿಗೆ ಒಳಪಟ್ಟಿದ್ದು ಹರಾಜನ್ನು ಖಾಯಂ ಮಾಡುವ ಅಥವಾ ತಿರಸ್ಕರಿಸುವ ಅಧಿಕಾರವನ್ನು ನಗರಸಭೆ ಕಾಯ್ದಿರಿಸಿಕೊಂಡಿದೆ.
9. ಮಳಿಗೆಯಲ್ಲಿ ವ್ಯವಹಾರ ಉದ್ದಿಮೆ ಮಾಡುವವರು ನಿಯಮಗಳಂತೆ ನಗರಸಭೆಯ ಲೈಸನ್ಸ್ ಪಡೆದುಕೊಳ್ಳತಕ್ಕದ್ದು.
10. ಮಳಿಗೆಯನ್ನು ಸ್ವಾಧೀನಕ್ಕೆ ಪಡೆಯುವ ಪೂರ್ವಕ್ಕೆ ಹರಾಜು ಅನುಮೋದಿಸಿದ 3 ತಿಂಗಳ ಮಾಹೆಯಾನ ಲೈಸನ್ಸ್ ಫೀಯನ್ನು ಮುಂಗಡವಾಗಿ ಪಾವತಿಸಬೇಕು. ಹಾಗೂ ರೂ.100 ಛಾಪ ಕಾಗದಲ್ಲಿ ಕರಾರು ಪತ್ರವನ್ನು ತಮ್ಮ ಖರ್ಚಿನಿಂದ ಮುಚ್ಚಳಿಕೆ ಕೊಡತಕ್ಕದ್ದು.
11. ಮಾಹೆಯಾನ ಲೀವ್ ಅಂಡ್ ಲೈಸನ್ಸ್ ಫೀ ಹಣವನ್ನು ಪಾವತಿಸುವ ಬಗ್ಗೆ ಮತ್ತು ಮಳಿಗೆಯನ್ನು ತೆರುವು ಮಾಡಿಸುವ ಸಂದರ್ಭಗಳಲ್ಲಿ ನಗರಸಭೆಯ ವಿರುದ್ಧ ನ್ಯಾಯಾಲಯದಲ್ಲಿ ಯಾವುದೇ ದಾವೆ ಹಾಕುವುದಿಲ್ಲ ಅಂತ ಮುಚ್ಚಳಿಕೆ ಬರೆದುಕೊಡಬೇಕು ಹಾಗು ಮಳಿಗೆ ವಿಷಯದಲ್ಲಿ ತಮ್ಮ ಅಕ್ಷೇಪಣೆಗಳು ಏನಾದರೂ ಇದ್ದಲ್ಲಿ ಈಗಲೇ ಇತ್ಯರ್ಥ ಪಡಿಸಿಕೊಳ್ಳಬೇಕು ಅನಂತರ ಮಾಡುವ ತಕರಾರುಗಳಿಗೆ ನಗರಸಭೆ ಜವಬ್ದಾರಿ ಆಗುವುದಿಲ್ಲ.
12. ಈ ಮೇಲ್ಕಂಡ ಷರತ್ತುಗಳ ಉಲ್ಲಂಘನೆ ಆದಲ್ಲಿ ಮಳಿಗೆಯ ಗುತ್ತಿಗೆಯ ಉಳಿದ ಅವಧಿಯನ್ನು ರದ್ದುಪಡಿಸಲಾಗುವುದು. ಹಾಗೂ ಕರ್ನಾಟಕ (ಪಬ್ಲಿಕ್ ಫ್ರಿಮಿಸೆಸ್ ವಿವಿಕ್ಷನ್ ಆಫ್ ಆನ್ ಆಥಾರೈಸ್ಡ್ ಅಕ್ಯೂಪೆಂಟ್ಸ್) ಕಾಯಿದೆ ಅಡಿಯಲ್ಲಿ ಮಳಿಗೆಯಿಂದ ಸದರಿಯವರನ್ನು ತೆರವುಗೊಳಿಸಲು ಕ್ರಮ ಕೈಗೊಳ್ಳಲಾಗುವುದು.

| | |
|---|---|
| ಸಹಿ/- | ಸಹಿ/- |
| ಎಂ.ಬಿ. ದ್ಯಾಬೇರಿ, ಭಾ.ಆ.ಸೇ. | ಎನ್. ರೇಣುಕಾ, ಕೆ.ಎಂ.ಎ.ಎಸ್. |
| ಆಡಳಿತಾಧಿಕಾರಿಗಳು, ನಗರಸಭೆ ಹರಿಹರ ಹಾಗೂ | ಪೌರಾಯುಕ್ತರು, |
| ಜಿಲ್ಲಾಧಿಕಾರಿಗಳು, ದಾವಣಗೆರೆ ಜಿಲ್ಲೆ, | ನಗರಸಭೆ, ಹರಿಹರ. |
| ದಾವಣಗೆರೆ. | |